ಶ್ರೀ ಎ. ಆರ್. ಬದರಿನಾರಾಯಣ.—ಇದು ಹೈಕೋರ್ಟಿನಲ್ಲಿ ಪೆಂಡಿಂಗ್ ಇತ್ತು ; ಸರ್ಕಾರದಲ್ಲಿ ಅಲ್ಲ. ಪಾರ್ಟೀಸ್ ಹೈಕೋರ್ಟಿಗೆ ಹೋಗಿರುವುದರಿಂದ ಅಷ್ಟು ನಿಧಾನವಾಗಿ 1972ರಲ್ಲಿ ಫೈನಲ್ ಸೀನಿಯಾರಿಟಿ ಲಿಸ್ಟ್ ಆಯಿತು. ಆದು ಆದ ಮೇಲೆ ಎಷ್ಟು ಸಂಬಳ ಫಿಕ್ಸ್ ಮಾಡಬೇಕೆಂದು ಎ. ಜಿ. ಗೆ ಬರೆದಾಗ ಅವರು ಕೆಲವು ಕ್ಲೆರಿಫಿಕೇಶನ್ ಕೇಳಿದ್ದಾರೆ. ಅದನ್ನು ಅದಷ್ಟು ಜಾಗ್ರತೆ ಕಳಿಸಿ ಮಾಡಿಸುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಜುಲ್ಯಾ 1972ರಲ್ಲಿ ಸೀನಿಯಾರಿಟಿ ಲಿಸ್ಟ್ ಫೈನಲೈಸ್ ಆಯಿತು ಎಂದು ಹೇಳಿದ್ದೀರಿ. ಕೂರ್ಗಿನಿಂದ ಬಂದಂತಹ ಪ್ರೊಫೆಸರುಗಳಿಗೆ ಹೈಕೋರ್ಟು ತೀರ್ಮಾನ ಕೊಟ್ಟರೂ ಕೂಡ ಅದನ್ನು ಇಂಪ್ಲಿಮೆಂಟ್ ಮಾಡದೆ ಇರುವುದಕ್ಕೆ ಕಾರಣವೇನು ?

ಶ್ರೀ ಎ. ಆರ್. ಬದರಿನಾರಾಯಣ. - ಹೈಕೋರ್ಟು ತೀರ್ಮಾನ ಬಂದ ಕೂಡಲೇ ನಾವು ಸೀನಿಯಾರಿಟಿ ಲಿಸ್ಟ್ ಮಾಡಿ ಎ. ಜಿ. ಗೆ ಪೇ ಫಿಕ್ಸ್ ಮಾಡುವುದಕ್ಕೆ ಕಳಿಸಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ರೀತಿ ಎರಡನೆಯ ದರ್ಜೆಗೆ ನಿರಸಮಾನಾಗಿ ತೀರ್ಮಾನ ಮಾಡಿರುವ ಪ್ರೊಫೆಸರುಗಳ ಸಂಖ್ಯೆ ಎಷ್ಟು ?

ಶ್ರೀ ಎ. ಆರ್. ಬದರಿನಾರಾಯಣ.—ಆ ಸಂಖ್ಯೆಯ ವಿವರ ಇಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಇವರಲ್ಲಿ ಎಷ್ಟು ಜನ ಕೆಲಸದಲ್ಲಿ ಇದ್ದಾರೆ, ಎಷ್ಟು ಜನ ರಿಜೈಯರ್ ಆಗಿದ್ದಾರೆ ಮತ್ತು ಎಷ್ಟು ಜನ ತೀರಿ ಹೋಗಿದ್ದಾರೆ ?

ಶ್ರೀ ಎ. ಆರ್. ಬದರಿನಾರಾಯಣ.—ಆ ಮಾಹಿತಿ ನನ್ನಲ್ಲಿ ಈಗ ಇಲ್ಲ.

Vignan industries at Tarikere

864. Sri S. M. SHEERANALY CHANDRASEKHAR (Hosanagar).—

Will the Minister for Industries be pleased to state —

(*a*) the amount of loan raised by the Vignan Industries, Tarikere, for which Government has stood guarantee ;

(*b*) whether the Government is satisfied that the Company is working satisfactorily ;

(*c*) the steps the Government has taken to ensure this before standing guarantee ?

SRI S. M. KRISHNA (Minister for Industries).—

(*a*) Government have stood guarantee for loan of Rs. 38.25 lakhs.

(*b*) Yes.

(*c*) The assets of the Company have been mortgaged in favour of Government.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾವು (ಅ) ಪ್ರಶ್ನೆಗೆ ಹೌದು ಎಂದು ಹೇಳಿದ್ದೀರಿ. ಈ ಕಂಪೆನಿ ಪ್ರಾರಂಭ ಆದ ಲಾಗಾಯ್ತು ವರ್ಷ ವರ್ಷ ಉತ್ಪನ್ನ ಎಷ್ಟು ಮಾಡಿದೆ, ಕೆಲಸಗಾರರಿಗೆ ಬೋನಸ್ ಎಷ್ಟು ಕೊಟ್ಟಿದೆ ಮತ್ತು ಶೇರ್‌ದಾರರಿಗೆ ಡಿವಿಡೆಂಡ್ ಎಷ್ಟು ಕೊಟ್ಟಿದೆ ?

† ಶ್ರೀ ಎಸ್. ಎಂ. ಕೃಷ್ಣ.—ಈ ಕಾರ್ಖಾನೆಯ ಲಾಭ ನಷ್ಟದ ಬಗ್ಗೆ ತಾವು ಪ್ರಶ್ನೆಯಲ್ಲಿ ನಮೂದು ಮಾಡಿಲ್ಲ. ಆದನ್ನು ನಮೂದು ಮಾಡಿ ಬೇರೆ ಪ್ರಶ್ನೆ ಕೇಳಿದರೆ ಅಗತ್ಯವಾಗಿ ಆದನ್ನು ಹೇಳಬಹುದು.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್, —ಈ ಕಂಪೆನಿ ತೃಪ್ತಿಕರವಾಗಿ ಕೆಲಸ ಮಾಡುತ್ತಿದೆಯೇ ಎಂದು ಕೇಳಿದ್ದಕ್ಕೆ ಹೌದು ಎಂದು ಹೇಳಿದ್ದೀರಿ ಇದನ್ನು ಯಾವ ಕಾರಣದಿಂದ ಹೇಳಿದ್ದೀರಿ ?

ಶ್ರೀ ಎಸ್. ಎಂ. ಕೃಷ್ಣ.—ಈ ಕಾರ್ಖಾನೆ 1965ನೇ ಇಸವಿಯಲ್ಲಿ ಸರ್ಕಾರಿ ಗ್ಯಾರೆಂಟಿ ಪಡೆದು 30 ಲಕ್ಷ ರೂಪಾಯಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಿಂದ ಪಡೆಯಿತು. ಇತ್ತೀಚೆಗೆ 1971ನೇ ಇಸವಿಯಲ್ಲಿ ನಮ್ಮ ಮೈಸೂರು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೊರೇಷನಿಂದ ಕೆಲವು ಹಣವನ್ನು ವರ್ಕಿಂಗ್ ಕ್ಯಾಪಿಟಲಿಗೋಸ್ಕರ ಕೊಟ್ಟಿದ್ದಾರೆ. ಅದು ಸುಮಾರು 9 ಲಕ್ಷ ರೂಪಾಯಿ. ಈ ಕಾರ್ಖಾನೆ ಎಷ್ಟು ಪ್ರಮಾಣದಲ್ಲಿ ಲಾಭವನ್ನು ಮಾಡಬೇಕೆಂದು ಆಶೆ ಇಟ್ಟುಕೊಂಡಿದ್ದೆವೋ ಅಷ್ಟು ಪ್ರಮಾಣದಲ್ಲಿ ಮಾಡುವುದಕ್ಕೆ ರಾ ಮೆಟೀರಿಯಲ್ಸ್ ತೊಂದರೆಯೇ ಕಾರಣವಾಗಿದೆ. ಇತ್ತೀಚೆಗೆ ಕೆ. ಜಿ. ಎಫ್‌ನಲ್ಲಿರತಕ್ಕಂತಹ ಭಾರತ್ ಆರ್ಥ್ ಮೂವರ್ಸ್‌ನಿಂದ ಇವರಿಗೆ ಒಂದು ದೊಡ್ಡ ಆರ್ಡರ್ ಬಂದಿದೆ. ಅದರ ಮೇಲೆಯಿಂದ ಈ ಕಾರ್ಖಾನೆ ಪೂರ್ತಿಯಾಗಿ ಅದರ ಕೆಪೆಸಿಟಿಯನ್ನು ಉಪಯೋಗಿಸಿಕೊಂಡು ಲಾಭದಾಯಕವಾಗಿ ಕೆಲಸ ಮಾಡಬಹುದು. ಅಲ್ಲದೆ ಇದರಲ್ಲಿ ಮಿಸ್‌ಮೇನೇಜ್‌ಮೆಂಟ್ ಇದೆಯೆಂಬುದನ್ನು ಸರ್ಕಾರಕ್ಕೆ ಆರೋಪಣೆ ತರುತ್ತಿದ್ದಾರೆ. ಇದರ ಬಗ್ಗೆ ಮ್ಯಾನೇಜ್‌ಮೆಂಟಿನವರಿಗೆ ತೀವ್ರವಾದ ಎಚ್ಚರಿಕೆಯನ್ನು ಕೊಟ್ಟಿದ್ದೇವೆ. ಇನ್ನು ಮುಂದೆ ಆ ರೀತಿ ಅಪಾದನೆಗಳು ಬಾರದಂತೆ ಎಚ್ಚರಿಕೆಯನ್ನು ನಾವು ಅವರಿಗೆ ಕೊಟ್ಟಿದ್ದೇವೆ.

ಶ್ರೀ ಹಂಜಿ ಶಿವಣ್ಣ.—ಈ ಕಾರ್ಖಾನೆಯ ಚೇರ್‌ಮೇನ್ ಯಾರು ಮತ್ತು ಅವರು ಎಲ್ಲಿಯವರು ? ಮತ್ತು ಇದಕ್ಕೆ ಹೊಸದಾಗಿ ವರ್ಕಿಂಗ್ ಕ್ಯಾಪಿಟಲ್ ಕೊಡುವುದಕ್ಕೆ ಸರ್ಕಾರ ಯೋಚನೆ ಮಾಡುತ್ತೀರಾ ? ಮತ್ತು ಇಲ್ಲಿ ತೃಪ್ತಿಕರವಾಗಿ ಕೆಲಸವಾಗುತ್ತಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಮೈಸೂರು ಫೈನಾನ್ಸಿಂಗ್ ಕಾರ್ಪರೇಶನಿನವರು ಸಾಲ ಕೊಟ್ಟಿದ್ದಾರೆ. ಸ್ಟೇಟ್ ಬ್ಯಾಂಕಿನವರು ಸಾಲ ಕೊಟ್ಟಿದ್ದಾರೆ ಮತ್ತು ಇಂಡಸ್ಟ್ರಿಯಲ್ ಕಾರ್ಪೊರೇಷನಿನವರು ಸಹ ಸಾಲ ಕೊಟ್ಟಿದ್ದಾರೆ. ಮತ್ತು ಈ ಕಾರ್ಖಾನೆ ತೃಪ್ತಿಕರವಾಗಿ ಕೆಲಸ ಮಾಡುತ್ತಿಲ್ಲ ವೆಂಬ ಭಾವನೆ ಜನರಲ್ಲಿ ಉಂಟು. ಕಾರಣ ಇದು ಲಾಭ ಗಳಿಸುತ್ತಾ ಇಲ್ಲ. ಆದ್ದರಿಂದ ತೃಪ್ತಿಕರವಾಗಿ ಕೆಲಸ ಮಾಡುವುದಿಲ್ಲವೆಂದು ಹೇಳುತ್ತಾರೆ. ಇವತ್ತು ರಾ ಮ್ಯಾಟರೀಯಲ್ಸ್ ಸರಿಯಾಗಿ ಸಿಗದಿದ್ದರೆ ಯಾವ ಕಾರ್ಖಾನೆ ತಾನೆ ಸರಿಯಾಗಿ ಕೆಲಸ ಮಾಡುವುದಕ್ಕಾಗುತ್ತದೆ ? ಇದನ್ನು ಸರಿಪಡಿಸುವುದಕ್ಕೆ ಕೆಲವು ಪ್ರಯತ್ನಗಳನ್ನು ಮಾಡಿದ್ದೇವೆ. ಅದರಲ್ಲಿ ಒಂದು ಪ್ರಯತ್ನ, ಕೆ. ಜಿ. ಎಫ್ ನಲ್ಲಿರುವ ಭಾರತ್ ಆರ್ಥ್ ಮೂವರ್ಸ್‌ನಿಂದ ಒಂದು ದೊಡ್ಡ ಆರ್ಡರ್ ಇದಕ್ಕೆ ಬಂದಿದೆ. ಆದ್ದರಿಂದ ಇನ್ನು ಮುಂದೆ ಈ ಕಾರ್ಖಾನೆ ಉತ್ತಮವಾಗಿ ಕೆಲಸ ಮಾಡಬಹುದೆಂದು ನಿರೀಕ್ಷಣೆ ಮಾಡಬಹುದು. ಮತ್ತು ಇದರ ಚೇರ್‌ಮೇನ್‌ರು ಒಬ್ಬ ಸರ್ಕಾರೀ ಅಧಿಕಾರಿಗಳು.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.— ಈ ಕಾರ್ಖಾನೆಯಲ್ಲಿ ಸರ್ಕಾರದ ಬಂಡವಾಳ ಹೆಚ್ಚು ಕಡಿಮೆ ಸೇಕಡ 40ರಷ್ಟು ಇದೆ. ತಮ್ಮ ಹೇಳಿಕೆ ಪ್ರಕಾರ ಹತ್ತಾರು ವರ್ಷಗಳಿಂದಲೂ ಆ ರೀತಿ ಲುಕ್ಸಾನುನಲ್ಲಿರುವುದರಿಂದ ಆ ಕಾರ್ಖಾನೆಯನ್ನು ಸರ್ಕಾರದವರೇ ವಶಕ್ಕೆ ತೆಗೆದುಕೊಂಡು ಸರಿಯಾದ ರೀತಿಯಲ್ಲಿ ನಡೆಸುವುದಕ್ಕೆ ಏರ್ಪಾಡುಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಅದು ಪರಿಶೀಲನೆಗೆ ಸೂಕ್ತವಾಗಿರುವ ಸಲಹೆ.

Allotment of Iron to a Minister

28. Sri KAGODU THIMMAPPA (Sagar).—

Will the Minister for Industries be pleased to state :—

(*a*) whether it is a fact that Industries Minister has permitted one of the Ministers to obtain 30,000 tonnes of iron from Mysore Iron and Steel Limited ;

(*b*) if so, the purpose for which permission has been granted ?